Reg No. B G 155 12-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪಚ್ಚೆ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರಧಾನರ ಮೇಲೆ ಜನಸಂಘ ನಾಯಕರ ಆರೋಪ

ದುರಂತ

ಹೈದರಾಬಾದು— ಜೇಮ್ಸ್ ಸ್ಟ್ರೀಟ್ ಸ್ಟೇರ್ಷ ಹತ್ತಿರ ಸೇತುವೆ ಮೇಲೆ ಕೆಲಸ ಮಾಡುತ್ತಿದ್ದ ಗ್ಯಾಂಗ್‌ಮೆನ್‌ಗಳಿಗೆ ಗುಡ್ಸ್ ರೈಲು ಬಡಿದು, 12 ಮಂದಿ ಸತ್ತು ಇಬ್ಬರು ಗಾಯಗೊಂಡರು.

ಅಲ್ಲೂ ಗೋಳೇ

ಬೆಲ್ಗ್ರೇಡ್— ಯುಗೋಸ್ಲಾವಿಯಾದಲ್ಲಿ ಆರ್ಥಿಕ ಬಿಕ್ಕಟ್ಟು ಒದಗಿದೆಯೆಂದು ಪ್ರಕಟವಾಗಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ತತ್ಕಜ್ಞತಾಪೂರ್ವಕವಂದಿಸುತ್ತೇವೆ.

'ಸಂಪಾದಕ ' ಸತ್ಯವಾದಿ '

ಚಾಮರಜಪುರಂ, ಮೈಸೂರು 4.

ಶ್ರೀ ಶಿವಬಾಲಯೋಗಿ

ಬೆಂಗಳೂರು— ಒಂದು ತಪಸ್ಸಾಚರಿಸಿದ ಶ್ರೀ ಶಿವಬಾಲಯೋಗಿಯನೆರು ಭಾನುವಾರ ತನ್ನ ಆಶ್ರಮದಲ್ಲಿ ಹೊರಗೆ ಕಾಣಿಸಿಕೊಂಡರು – ಅವರ ದರ್ಶನಕ್ಕಾಗಿ ಸಹಸ್ರಗಟ್ಟಲೆ ಪುರುಷರೂ, ಸ್ತ್ರೀಯರೂ ಮಕ್ಕಳೂ ಗುಂಪುಗುಂಪಾಗಿ ಬಂದಿದ್ದರು.

★

ಹರತಾಳ

ಹುಬ್ಬಳ್ಳಿ— ಚಿನ್ನ ಹಸೋಟೆ ಶಾಸನ ಮತ್ತು ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಶನಿವಾರ ಸರಾಫ್ ವ್ಯಾಪಾರಿಗಳು ಹರತಾಳ ಆಚರಿಸಿದರು

●

ನಾಲಗಳು

ಆಂಧ್ರಪ್ರದೇಶವು ರೂ 14 50 ಕೋಟಿ ಪಂಜಾಬು ರೂ 6 ಕೋಟಿ, ಮಧ್ಯ ಪ್ರದೇಶವು ರೂ. 8 ಕೋಟಿ, ಗುಜರಾತು ರೂ. 16 ಕೋಟಿ 12 ಪರ್ಸ ವಾಯಿದೆಯ ನಾಲಾ ಎತ್ತುತ್ತವೆ.

★

ಜಾಕ್‌ಪಾಟ್

ಪೂನಾ— ಭಾನುವಾರ ನಡೆದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲಿನ ಒಂದೇ ಒಂದು ಟಿಕೇಟಿಗೆ ರೂ. 239421 ದೊರೆಯಿತು.

★

ವಿಷದ ಪರಿಣಾಮ

ಪಂಜಿ— ಪಾಂಡೆಯಲ್ಲಿ ಮಿಷನರಿಗಳು ಹಂಚಿದ ಹಿಟ್ಟನ್ನು ತಿಂದವರಲ್ಲಿ ಒಬ್ಬ ಸತ್ತ. 8 ಮಂದಿ ರೋಗಗ್ರಸ್ತರಾಗಿದ್ದಾರೆ. ವಿಷಮಿಶ್ರಿತವಿರಬಹುದೆಂದು ಶಂಕಿಸಲಾಗಿದೆ

ಸಿನಿಮಾ ನಟಿಯ ಕೊಲೆ

ಕ್ಯಾಲಿಫೋರ್ನಿಯ— ಬೆಟ್ಟದ ಮೇಲಿನ 200000 ಡಾಲರಿನ ಭೋಗವಿಲಾಸ ಭವನದಲ್ಲಿ ಪ್ರಖ್ಯಾತ ಸಿನಿಮಾ ನಟಿ ಟಾಟಿ (ಪೋಲಿಷ್ ಚಲಚಿತ್ರ ನಿರ್ದೇಶಕ ರೋಮ್ ಪೋರ್ಲಾಸ್ಕಿಯರ ಪತ್ನಿ) ಮತ್ತು ಇತರ ಮೂವರು ಪುರುಷರು ಮತ್ತು ಓರ್ವ ಹೆಂಗಸಿನ ಕೊಲೆಯಾಗಿರುವದು ಕಂಡುಬಂದಿದೆ – ಟಾಟಿ 8 ತಿಂಗಳ ಗರ್ಭಿಣಿಯಾಗಿದ್ದಳು – ಅವಳ ಗಂಡ ಈಗ ಲಂಡನ್ನಿನಲ್ಲಿದ್ದಾನೆ – ಈಕೆ ಮತ್ತು ಇವಳ ಗಂಡ ಬಾಡಿಗೆಗೆ ತೆಗೆದುಕೊಂಡಿದ್ದ ಈ ಭವನವು ಸಿನಿಮಾ ನಟ ಡೇರಿಸ್ ಡೇಯವರ ಮಗ ಟೆರಿ ಮೇಲ್ಟ್ಜಾರಿಗೆ ಸೇರಿದ್ದು – ತನಿಖೆ ನಡೆಯುತ್ತಿದೆ.

★

ಪ್ರವಾಹದ ಹಾವಳಿ

ಕಟಕ್— ಬಾರಾನದಿಯ ಭೀಕರ ಪ್ರವಾಹದಿಂದ ಗಂಜಾಂ ಜಿಲ್ಲೆಯು ಹಾಳಾಗಿದೆ ; ಅನೇಕ ಗ್ರಾಮಗಳು ಕೊಚ್ಚಿಹೋಗಿವೆ ಎಂದು ಮಂತ್ರಿ ಶ್ರೀ ಜಗನ್ನಾಥರಾವ್ ಹೇಳಿದರು.

★

ಮೂರ್ಛೆರೋಗದ ವ್ಯಾಸಂಗ

ಬೊಂಬಾಯಿ— 5 ವರ್ಷಗಳ ಕಾಲ ಮೂರ್ಛೆರೋಗದ ಸ್ವಭಾವ ಕಾರಣ ಮೊದಲಾದ್ದನ್ನು ವಾಸಂಗಮಾಡಲು ಇಲ್ಲಿಯ ಕೆ ಇ ಎಂ ಆಸ್ಪತ್ರೆ ಮತ್ತು ಭಾರತದ ಇತರ ನಾಲ್ಕು ಕೇಂದ್ರಗಳಿಗೆ ಅಮೇರಿಕಾ ಸರಕಾರ ರೂ 8.7 ಲಕ್ಷ ಗ್ರಾಂಟಿತ್ತಿದೆ.

ಉಕ್ಕಿನ ಪ್ರಕರಣ

ನವದೆಹಲಿ— ಉಕ್ಕಿನ ರಫ್ತು ಆಮದು ವಿಷಯವನ್ನು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿಗೆ ಸಹಿಸಬೇಕೆಂಬ ಸಲಹೆಯು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ವರದಿಯಾಗಿದೆ.

ಪುಟ್ಟ ಸರ್ವಾಧಿಕಾರಿ

ಚಂಡೀಘರ್— ಬ್ಯಾಂಕು ರಾಷ್ಟ್ರೀಕರಣ ಮಾಡಿದ್ದು ಜನತಾ ಹಿತಕ್ಕೆಂದು ಹೇಳುತ್ತಿರುವ ಪ್ರಧಾನಿ ಇಂದಿರಾರವರು, ನಿಜ ದೀನದಲಿತರ ಹಿತ ಅವರಿಗಿದ್ದರೆ, ಅನೇಕ ಲಕ್ಷ ರೂಪಾಯಿಗಳ ಖರ್ಚಿನಿಂದ ಕಟ್ಟಬೇಕೆಂದಿರುವ ತಮ್ಮ ಭವನ ನಿರ್ಮಾಣವನ್ನು ತ್ಯಜಿಸಿ, ಆ ಹಣವನ್ನು ಬಡಬಗ್ಗರಿಗೆ ಗುಡಿಸಲು ಕಟ್ಟಲು ಉಪಯೋಗಿಸಲಿ ಎಂದು ಜನಸಂಘದ ನಾಯಕ ಶ್ರೀ ಬಾಲರಾಜ ಮೋಡಕ್ ಹೇಳಿದರು – ಪ್ರಜಾರಾಜ್ಯ ರಕ್ಷಣೆಗೆ ಅವರ ಹತೋಟಿ ವಿಧಾನದ ಮಾರ್ಗಗಳನ್ನು ಜನತೆ ಮಟ್ಟಾಹಾಕಬೇಕೆಂದರು – ಪುಟ್ಟ ಸರ್ವಾಧಿಕಾರಿಗಳಾದ ಅವರಿಂದ ಪ್ರಜಾರಾಜ್ಯಕ್ಕೆ ಧಕ್ಕೆ ಎಂದು ಹೇಳಿದರು - ಬ್ಯಾಂಕು ರಾಷ್ಟ್ರೀಕರಣವು ಬಡವರ ಹಿತದೃಷ್ಟಿಯಿಂದಲ್ಲವೆಂದೂ, ಆದರೆ ತಮ್ಮ ಉಳಿವಿಕೆಗೆಂದೂ ಹೇಳಿದರು.

★

ಹಪ್ಪಳದ ಮಹಿಮೆ

ನವದೆಹಲಿ— ನ್ಯೂಯಾರ್ಕ್‌ನದೆ ನಡೆದ ರಾಷ್ಟ್ರೀಯ ಚಿತ್ರವಿಚಿತ್ರ ಆಹಾರ ಪ್ರದರ್ಶನದಲ್ಲಿ ಭಾರತವು ಭಾವಗಹಿಸಿತ್ತು – ಬಿಸಿಬಿಸಿಯಾಗಿ ಕರಿದ ಹಪ್ಪಳಕ್ಕೆ ಬಹಳ ಕೇಳಿಕೆ ಇತ್ತು – ಭಾರತದ ಹಲ್ವಾಗಳಿಗೂ, ರಸಗೋಳ, ಮಾವಿನಕಾಯಿ ಮತ್ತು ನಲ್ಲೀಕಾಯಿ ಉಪ್ಪಿನಕಾಯಿ ಒಳ್ಳೇ ಆಕರ್ಷಣೀಯವಾಗಿದ್ದವು – ಇದ್ದ ಮಾದರಿಗಳೆಲ್ಲಾ ಒಂದು ಗಂಟೆಯಲ್ಲಿ ಖಾಲಿಗಿ ಹೋದವು.

★

ನೆಪೋಲಿಯನ್

ಫ್ರಾನ್ಸಿನಲ್ಲಿ ಆಗಸ್ಟ್ 15 ರಂದು ನೆಪೋಲಿಯನ್ ಬೋನೋಪಾರ್ಟಿನ 200 ನೇ ಜನ್ಮದಿನೋತ್ಸವು ಆಚರಿಸಲಾಗುವುದು – ಸಂಯುಕ್ತ ಯೂರೋಪ್ ಸ್ಥಾಪನೆಯು ನೆಪೋಲಿಯನ್ನಿನ ಆಶಯವಾಗಿತ್ತು

ಸರ್ವೇಶ್ವರನ ವಚನಗಳು

ಒಡೆಯಲು
ಖಂಡುಗ ಹಾಲಿಗಾದರೂ ಹನಿಯೊಂದೆ ಸಾಕು ಹುಳಿ

ಸಾಯಲು
ಜಗಜಟ್ಟಿಗಾದರೂ ತೊಟ್ಟೊಂದೆ ಸಾಕು ವಿಷ
ಸತ್ಪುರುಷನ ಇರಿಯಲು ಮಾತೊಂದೆ ಸಾಕು, ಸರ್ವೇಶ್ವರ

ಬೆಳೆಯಲು
ಎಮ್ಮೆಯ ಹಾಲು ಕುಡಿದ್ದಾಕ್ಷಣಕೇ
ಎಮ್ಮೆಯ ಮಕ್ಕಳಲ್ಲ ನಾವು
ಆರಿಯಲು
ಇಂಗ್ಲೀಷ್ ಓದಿದಾಕ್ಷಣಕೇ
ಇಂಗ್ಲೀಷ್‌ನ ಗುಲಾಮರಲ್ಲ ನಾವು
ಅಂಧಾನುಕರಣೆಯ ಹೋಗಲಾಡಿಸೋ ಸರ್ವೇಶ್ವರ

ಜೀವದಾನ ಮಾಡಿದ ತಾಯಿತಂದೆಗಳಿಗೆ ಮಣಿಸು
ಈರೇಳು ಲೋಕವಾಳುವ ನಿನ್ನಡಿಗಳಿಗೆ ಮಣಿಸು
ಅಧಿಕಾರದ ಮದವೇರಿದ ನರಕೀಟಗಳಿಗೆ ಮಣಿಸದಿರು, ಸರ್ವೇಶ್ವರ.

— ಡಿ. ಲಿಂಗಯ್ಯ [ಕನ್ನಡ'ನುಡಿ]

ಪ್ರಾಯಶ್ಚಿತ್ತ

ಮುಜಾಫರಪುರ— ಮಾಜಿ ಬೀಹಾರು ಮುಂತ್ರಿ ಶ್ರೀ ಮೋಹರ್‌ಲಾಲ್ ಗುಪ್ತರು ಕಾಂಗ್ರೆಸ್ಸಿನಲ್ಲಿ ಬಿಟ್ಟು ಬೇರೆ ಪಕ್ಷಕ್ಕೆ ಹೋದ ತಪ್ಪಿಗೆ ಆತ್ಮಶುದ್ಧಿಗಾಗಿ 21 ದಿನಗಳ ಉಪವಾಸ ಪ್ರಾರಂಭಿಸಿದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 3 ನೇ ವಾರ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 5 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ತಮಾ, ರಂಗ, ಸತ್ಯ
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳ ಹೆಚ್ಚಳಕ್ಕಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Edited, Printed & Published by Dharmaprachara Nirat M S Krishna Rao (Proprietor) at the Satyavadi Press Chamarajapuram, Mysore 4